ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಹನ್ನೊಂದು ಯೋಜನೆಗಳು.

ಆ) ಯೋಜನೆಯ ಹೆಸರು ಮಂಜೂರಾದ ದಿನಾಂಕ

೧)	ಗಾಣಗಾಪುರ	೩೧-೧೦-೧೯೬೮	ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ.
೨)	ಶೇಷಗಿರಿವಾಡಿ	೨೦-೧೨-೧೯೬೫	
೩)	ಡಿಕ್‌ಸಂಗಾ	೧೦-೧೧-೧೯೭೨	
೪)	ಗೋರ್ (ಬಿ)	೨೫-೫-೧೯೭೫	
೫)	ಚೌಡಾಪುರ	೨೬-೯-೧೯೭೬	
೬)	ಗಟ್ಟರಗಾ	೫-೯-೧೯೭೩	
೭)	ಬಂಡರ್ವಾಡ್	೨೦-೯-೧೯೬೮	
೮)	ಬೊಲ್ಲಾ	೨೦-೫-೧೯೭೩	
೯)	ಶಿವಾಪುರ	೨೫-೫-೧೯೭೩	ಕಾಮಗಾರಿಗಳು ಪ್ರಗತಿಯಲ್ಲಿವೆ.
೧೦)	ಚಿನ್ನಮಲ್ಲಿ	೩೦-೯-೧೯೭೩	
೧೧)	ಮಣ್ಣೂರು	೧೯೮೬-೮೭	

ಇ) ಏಳು ಯೋಜನೆಗಳು.

ಈ) ೯೭.೩೩೩ ಲಕ್ಷ ರೂ.ಗಳು ವೆಚ್ಚವಾಗಿದೆ ಭೂಸ್ವಾಧೀನ ಮತ್ತು ಟ್ರಾನ್ಸ್‌ಫಾರ್ಮರ್ ಜೋಡಣೆ ಇವುಗಳನ್ನು ಮಾಡಲು ತಡವಾಗಿದೆ.

ಉ) ಈಗ ಸಧ್ಯದಲ್ಲಿ ೪೦೦ ಹೆಕ್ಟೇರ್ ಜಮೀನು ನೀರಾವರಿಯಾಗುತ್ತಿದೆ. ಉಳಿದ ಯೋಜನೆಗಳು ಪೂರ್ತಿಯಾದ ನಂತರ ೩೩೮೧ ಹೆಕ್ಟೇರ್ ಜಮೀನು ನೀರಾವರಿಯಾಗುವುದು.

ಕೃಷ್ಣರಾಜಪುರಂ ಸ್ಟೇಷನ್‌ಹತ್ತಿರ ಇರುವ ಸೇತುವೆ ವಿಸ್ತರಣೆ

೧೦೦. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರುನಗರ ಜಿಲ್ಲೆಯ ಕೃಷ್ಣರಾಜಪುರಂ ರೈಲ್ವೆ ಸ್ಟೇಷನ್ ಬಳಿ ಇರುವ ಸೇತುವೆ (ರಾಷ್ಟ್ರೀಯ ಹೆದ್ದಾರಿ-೪) ಹತ್ತಿರ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಸೇತುವೆ ವಿಸ್ತರಣೆಯ ಬಗ್ಗೆ ಸರ್ಕಾರದವರು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).

ಅ) ಬಂದಿಲ್ಲ.

ಆ) ಆದಾಗ್ಯೂ ಈ ಸೇತುವೆಯನ್ನು ವಿಸ್ತರಿಸಿ ಪುನರ್ ನಿರ್ಮಾಣ ಮಾಡಲು ಕೇಂದ್ರಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ಗ್ರ್ಯಾಫೈಟ್ ಇಂಡಿಯಾ ವರ್ತೂರು ರಸ್ತೆ ವಿಸ್ತರಣೆ ಕಾರ್ಯ

೧೦೧. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರುನಗರ ಜಿಲ್ಲೆಯ ಗ್ರಾಫೈಟ್ ಇಂಡಿಯಾ ವರ್ತೂರು ರಸ್ತೆ ವಿಸ್ತರಣೆ ಕಾರ್ಯ ಪ್ರಾರಂಭವಾಗದಿರಲು ಕಾರಣಗಳೇನು ? ಮತ್ತು ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ?

ಆ) ಈ ವಿಸ್ತರಣೆ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ?